# ತೂಗಿರೆ ರಂಗನ ತೂಗಿರೆ ಕೃಷ್ಣನ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** This is from the book: Purandara Sahitya Darshana, Samputa 4, Keerthana Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** The wordings given without highlights are as per Ref. 3. These lyrics are similar to Ref. 2. But the wordings in Ref. 1 are slightly different and are given separately in green highlights.

ರಾಗ: ಶಂಕರಾಭರಣ ತಾಳ: ಅಟ

ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತನ ॥ ಪ ॥

ತೂಗಿರೆ ವರಗಿರಿಯಪ್ಪ ತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ ॥ ಅಪ ॥

ನಾಗಲೋಕದಲ್ಲಿ ನಾರಾಯಣ ಮಲಗ್ಯಾನೆ
ನಾಗ ಕನ್ನಿಕೆಯರು ತೂಗಿರೆ
ನಾಗವೇಣಿಯರು ನೇಣ ಪಿಡಿದುಕೊಂಡು
ಬೇಗನೆ ತೊಟ್ಟಿಲ ತೂಗಿರೆ ॥ ೧ ॥

ಇಂದ್ರಲೋಕದಲ್ಲುಪೇಂದ್ರ ಮಲಗ್ಯಾನೆ
ಇಂದುಮುಖಿಯರೆಲ್ಲ ತೂಗಿರೆ
ಇಂದ್ರ ಕನ್ನಿಕೆಯರು ಚಂದದಿ ಬಂದು
ಮುಕುಂದನ ತೊಟ್ಟಿಲ ತೂಗಿರೆ ॥ ೨ ॥

ಆಲದೆಲೆಯ ಮೇಲೆ ಶ್ರೀಲೋಲ ಮಲಗ್ಯಾನೆ

ನೀಲ ಕುಂತಳೆಯರು ತೂಗಿರೆ
ವ್ಯಾಳ ಶಯನ ಹರಿ ಮಲಗು ಮಲಗುಯೆಂದು
ಬಾಲ ಕೃಷ್ಣಯ್ಯನ ತೂಗಿರೆ || ೩ ||

ಸಾಸಿರ ನಾಮನೆ ಸರ್ವೋತ್ತಮನೆಂದು
ಸೂಸುತ್ತ ತೊಟ್ಟಿಲ ತೂಗಿರೆ
ಲೇಸಾಗಿ ಮಡುವಿನೊಳ್ ಶೇಷನ ತುಳಿದಿಟ್ಟ
ದೋಷ ವಿದೂರನ ತೂಗಿರೆ || ೪ ||

ಅರಳೆಲೆ ಮಾಗಾಯಿ ಕೊರಳ ಮುತ್ತಿನ ಹಾರ
ತರಳನ ತೊಟ್ಟಿಲ ತೂಗಿರೆ
ಸಿರಿದೇವಿ ರಮಣನೆ ಪುರಂದರ ವಿಠಲನೆ
ಕರುಣದಿ ಮಲಗೆಂದು ತೂಗಿರೆ || ೫ ||

**Ref. for the below lyrics:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.

ರಾಗ: ಶಂಕರಾಭರಣ ತಾಳ: ಅಟ

ತೂಗಿರೆ ರಂಗನ ತೂಗಿರೆ ಕೃಷ್ಣನ
ತೂಗಿರೆ ಅಚ್ಯುತಾನಂತನ || ಪ ||

ತೂಗಿರೆ ವರಗಿರಿ ಅಪ್ಪ ತಿಮ್ಮಪ್ಪನ
ತೂಗಿರೆ ಕಾವೇರಿ ರಂಗಯ್ಯನ || ಅಪ ||

ಇಂದ್ರಲೋಕದೊಳುಪೇಂದ್ರ ಮಲಗಿಹನೆ
ಬಂದೊಮ್ಮೆ ತೊಟ್ಟಿಲ ತೂಗಿರೆ
ಮಂದಗಮನೆಯರು ಚೆಂದದಿ ಪಾಡುತ
ನಂದನ ಕಂದನ ತೂಗಿರೆ || 1 ||

ನಾಗಲೋಕದಲ್ಲಿ ನಾರಾಯಣ ಮಲಗಿಹನೆ
ಹೋಗಿ ನೀವ್ ತೊಟ್ಟಿಲ ತೂಗಿರೆ

ನಾಗವೇಣಿಯರು ನಾಲ್ಕು ನೇಣನು ಪಿಡಿದು
ಭಾಗ್ಯವಂತನೆಂದು ತೂಗಿರೆ || 2 ||

ಜಲಧಿಯೊಳಾಲದ ಎಲೆಯಲ್ಲಿ ಮಲಗಿದ
ಚೆಲುವನ ತೊಟ್ಟಿಲ ತೂಗಿರೆ
ಸುಲಭ ದೇವರ ದೇವ ಬಲಿಬಂಧಮೋಚಕ
ಎಳೆಯನ ತೊಟ್ಟಿಲ ತೂಗಿರೆ || 3 ||

ಸೂಸುವ ಮಾಡುವಿನೊಳ್ ಕಾಳಿಯನ ತುಳಿದಿಟ್ಟ
ದೋಷ ವಿದೂರನ ತೂಗಿರೆ
ಸಾಸಿರನಾಮದ ಸರ್ವೋತ್ತಮನೆಂದು
ಲೇಸಾಗಿ ತೊಟ್ಟಿಲ ತೂಗಿರೆ || 4 ||

ಅರಳೆಲೆ ಮಾಗಾಯಿ ಕೊರಳ ಪದಕ ಸರ
ತರಳನ ತೊಟ್ಟಿಲ ತೂಗಿರೆ
ಉರಗಾದ್ರಿವಾಸ ಶ್ರೀ ಪುರಂದರ ವಿಠ್ಠಲನ
ಹರುಷದಿ ಪಾಡುತ ತೂಗಿರೆ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಡುವಿನೊಳ್ ಶೇಷನ –** ಕಾಳಿಂದಿ ಮಡುವಿನಲ್ಲಿ ಕಾಳಿಂಗನನ್ನು.

**ವರಗಿರಿ** = ತಿರುಪತಿ, ಶ್ರೀಗಿರಿ

**ಕಾವೇರಿ ರಂಗಯ್ಯ** = ಶ್ರೀರಂಗಪಟ್ಟಣದ ಶ್ರೀರಂಗ

**ಜಲಧಿಯೊಳಾಲದ ಎಲೆಯಲ್ಲಿ ಮಲಗಿದ** = ಮಹಾ ಪ್ರಳಯಾ ನಂತರದ ಕಾಲಾವಧಿಯಲ್ಲಿ ಪರಮಾತ್ಮನು ರಮಾದೇವಿಯನ್ನು ಆಲದೆಲೆಯನ್ನಾಗಿ ಮಾಡಿಕೊಂಡು ತಾನು ಕೂಸಾಗಿ ಅದರ ಮೇಲೆ ಮಲಗಿ ಮಹಾ ಸಾಗರದಲ್ಲಿ ತೇಲುತ್ತಿರುತ್ತಾನೆ.

**ಉರಗಾದ್ರಿ** = ಶೇಷಾಚಲ, ತಿರುಪತಿ

**Classification:** Keerthane
**Ankita:** sri purandara vittala

**Location:** NA

**Category:** Laali Song, Vishnu Stuti

**Group Words:** Vishnu, srinivasa, paramatma, Krishna, achyuta, Ananta, kaveri, deva, shesha, vidura, karuna, Tirupati,

**Pravachana:** NA

**Explanation:** NA